1.ಉಪಾಧ್ಯಕ್ಷರ ಚುನಾವಣೆ

1. ವಿಷಯ: ಶ್ರೀ ಕೆ.ಜಿ.ಬೋಪಯ್ಯನವರನ್ನು ಹದಿಮೂರನೇ ವಿಧಾನಸಭೆಯ ಉಪಾಧ್ಯಕ್ಷ ಸ್ಥಾನಕ್ಕೆ ಚುನಾಯಿಸುವ ಬಗ್ಗೆ.

ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು (ಅಬಕಾರಿ, ವಾರ್ತಾ, ಮಾಹಿತಿ ಮತ್ತು ಜೈವಿಕ ತಂತ್ರಜ್ಞಾನ, ವಿಜ್ಞಾನ ಮತ್ತು ತಂತ್ರಜ್ಞಾನ ಹಾಗೂ ಬೆಂಗಳೂರು ಜಲಮಂಡಳಿ ಸಚಿವರು): ಮಾನ್ಯ ಅಧ್ಯಕ್ಷರೆ, ವಿದ್ಯಾರ್ಥಿ ದೆಸೆಯಿಂದಲೂ ಕೂಡ ಹೋರಾಟ ಮಾಡುತ್ತಾ, ತುರ್ತು ಪರಿಸ್ಥಿತಿಯಲ್ಲಿ ಜೈಲಿನಲ್ಲಿದ್ದು, ಮುಂದೆ ಮಡಿಕೇರಿ ಶಾಸಕರಾಗಿ ಪ್ರಸ್ತುತ ವಿರಾಜಪೇಟೆಯ ಶಾಸಕರಾಗಿರುವ ಶ್ರೀ ಕೆ.ಜಿ.ಬೋಪಯ್ಯರವರನ್ನು ಹದಿಮೂರನೇ ವಿಧಾನ ಸಭೆಯ ಉಪಾಧ್ಯಕ್ಷ ಸ್ಥಾನಕ್ಕೆ ಅವಿರೋಧವಾಗಿ ಚುನಾಯಿಸಬೇಕೆಂದು ನಾನು ಸೂಚಿಸುತ್ತೇನೆ.

ಶ್ರೀ ಎಸ್.ಆರ್.ವಿಶ್ವನಾಥ್(ಯಲಹಂಕ ಕ್ಷೇತ್ರ): ಮಾನ್ಯ ಅಧ್ಯಕ್ಷರೇ, ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡುರವರು ಸೂಚಿಸಿರುವ ಪ್ರಸ್ತಾಪವನ್ನು ನಾನು ಅನುಮೋದಿಸುತ್ತೇನೆ.

ಪ್ರಸ್ತಾಪವನ್ನು ಮಂಡಿಸಲಾಯಿತು.

ಅಧ್ಯಕ್ಷರು: ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡುರವರು ಸೂಚಿಸಿರುವ ಮತ್ತು ಶ್ರೀ ಎಸ್.ಆರ್.ವಿಶ್ವನಾಥ್‌ರವರು ಅನುಮೋದಿಸಿರುವ ಪ್ರಸ್ತಾಪ ಈ ರೀತಿ ಇದೆ:

"ಶ್ರೀ ಕೆ.ಜಿ.ಬೋಪಯ್ಯರವರನ್ನು ಹದಿಮೂರನೇ ವಿಧಾನಸಭೆಯ ಉಪಾಧ್ಯಕ್ಷರನ್ನಾಗಿ ಚುನಾಯಿಸುವುದು"

ಪ್ರಸ್ತಾಪ ಸರ್ವಾನುಮತದಿಂದ ಅಂಗೀಕರಿಸಲ್ಪಟ್ಟಿತು ಮತ್ತು
ಶ್ರೀ ಕೆ.ಜಿ.ಬೋಪಯ್ಯರವರನ್ನು ಉಪಾಧ್ಯಕ್ಷರನ್ನಾಗಿ ಚುನಾಯಿಸಲಾಯಿತು.

ಅಧ್ಯಕ್ಷರು: ಈಗ ನಾನು ಮಾನ್ಯ ಕೆ.ಜಿ.ಬೋಪಯ್ಯರವರನ್ನು ಹೃತ್ಪೂರ್ವಕವಾಗಿ ಅಭಿನಂದಿಸುತ್ತೇನೆ. ಮಾನ್ಯ ಮುಖ್ಯಮಂತ್ರಿಯವರು ಮತ್ತು ಮಾನ್ಯ ವಿರೋಧ ಪಕ್ಷದ ನಾಯಕರು ಶ್ರೀ ಕೆ.ಜಿ.ಬೋಪಯ್ಯರವರನ್ನು ಅವರ ಆಸನಕ್ಕೆ ಕರೆದುಕೊಂಡು ಬರಬೇಕೆಂದು ನಾನು ವಿನಂತಿಸುತ್ತೇನೆ.

(ಮಾನ್ಯ ಮುಖ್ಯಮಂತ್ರಿಯವರಾದ ಶ್ರೀ ಬಿ.ಎಸ್.ಯಡಿಯೂರಪ್ಪನವರು ಮತ್ತು ಮಾನ್ಯ ವಿರೋಧ ಪಕ್ಷದ ನಾಯಕರಾದ ಶ್ರೀ ಮಲ್ಲಿಕಾರ್ಜುನ ಖರ್ಗೆಯವರು ಶ್ರೀ ಬೋಪಯ್ಯರವರನ್ನು ಉಪಾಧ್ಯಕ್ಷ ಪೀಠಕ್ಕೆ ಕರೆದುಕೊಂಡು ಬಂದರು)

ಅಧ್ಯಕ್ಷರು: ಮಾನ್ಯ ಮುಖ್ಯಮಂತ್ರಿಗಳು ಉಪಾಧ್ಯಕ್ಷರಿಗೆ ಅಭಿನಂದನೆ ಸಲ್ಲಿಸಿರುತ್ತಾರೆ.